Estd : 1983
ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ
ಬಿ. ಆರ್. ದರೂರ ಪ್ರಥಮ ದರ್ಜೆ ಕಾಲೇಜು, ಹಾರೂಗೇರಿ - ೫೯೧೨೨೦
ತಾ : ರಾಯಬಾಗ                ಜಿ : ಬೆಳಗಾವಿ
Phone No : 08331 - 257853
Shree Vrushabhendra Education Society's
**B. R. DARUR FIRST GRADE COLLEGE, HARUGERI - 591220**
Tq : Raibag    NAAC Reaccredited with 'A' Grade    Dist : Belagavi
Affiliated to Rani Channamma University, Belagavi
E-mail : svesaccharugeri@gmail.com    Website : www.svesaccharugeri.org

# Significant Contribution of IQAC - 2023-24

1) Organized workshop Preparation AQAR
2) Submission of AQAR for the year 2023-24.
3) Implementation "Saturday with Achievers" Program.
4) Organized Research Workshop.
5) Organized Study Tour for Final Year Students
6) Organized Blood Donation Camp on 27/01/2024

PRINCIPAL
Shri Vrushabhendra Education Society
B.R.Darur First Grade College,Haruge[illegible]
Tq.Raibag - 591220. Dt.Belagavi

Shri Vrushabhendra Education Society's
ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ
B R DARUR FIRST GRADE COLLEGE
ಬಿ ಆರ್ ದರೂರ ಪ್ರಥಮ ದರ್ಜೆ ಕಾಲೇಜು
HARUGERI-591 220
ಹಾರೂಗೇರಿ-591 220
ESTD : 1983
Tq: Raibag
NAAC Reaccredited with 'A' Grade
Dist: Belagavi
E-Mail : svesaccharugeri@gmail.com
Affiliated to Rani Channamma University, Belagavi
+919448083419

## Comparative chart showing updates of ICT Facilities

| SL-No | facility | In 2022 | In2023 |
|---|---|---|---|
| 1 | Total computers | 92 | 92 |
| 2 | Internet facility | 60mbps | 60mbps |
| 3 | ICT Classroom | 8 | 9 |
| 4 | LED TV | 05 | 5 |
| 5 | E-Journals | 6000 | 6000 |
| 6 | E-Books | 125000 | 125000 |
| 7 | Number of LCD Project | 08 | 09 |
| 8 | CD,Video | 719 | 719 |
| 9 | Virtual class room | 01 | 1 |
| 10 | Xerox machine | 03 | 04 |
| 11 | scanner | 04 | 04 |
| 12 | CCTV camera | 42 | 42 |
| 13 | Laptops | 04 | 04 |
| 14 | Audio system | 04 | 04 |

PRINCIPAL
Shri Vrushabhendra Education Society's
B. R. Darur First Grade College,
Harugeri - 591220. Dist.Belagavi

ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ

# ಬಿ.ಆರ್. ದರೂರ ಪ್ರಥಮ ದರ್ಜೆ ಕಾಲೇಜು, ಹಾರೂಗೇರಿ-591220

# ವಾರ್ಷಿಕ ವರದಿ 2023-24

ಈ ಸಮಾರಂಭದ ಅಧ್ಯಕ್ಷರಾದ ಡಾ. ವಿ. ಎಸ್. ಮಾಳಿ ಅವರೇ, ಮುಖ್ಯ ಅತಿಥಿಗಳಾದ ಪ್ರೊಫೆಸರ್ ಆರ್. ಎಚ್. ಸಯ್ಯದ್ ಅವರೇ, ವಿಶೇಷ ಆಮಂತ್ರಿತರಾದ ಶ್ರೀ ಆರ್.ಎಸ್.ಯಲಶೆಟ್ಟಿ ಅವರೇ, ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರೇ, ಪ್ರಾಂಶುಪಾಲರೇ, ಸಿಬ್ಬಂದಿ ಮಿತ್ರರೇ, ವಿದ್ಯಾರ್ಥಿ, ವಿದ್ಯಾರ್ಥಿನಿಯರೆ ಹಾಗೂ ಸಮಾರಂಭಕ್ಕೆ ಸಾಕ್ಷಿಯಾಗಿರುವ ಕನ್ನಡದ ಮನಸ್ಸುಗಳಿಗೆಲ್ಲ ನಮಸ್ಕಾರಗಳು.

ಇಂದು ನಮ್ಮ ಮಹಾವಿದ್ಯಾಲಯದಲ್ಲಿ 40ನೇ ವಾರ್ಷಿಕ ಸ್ನೇಹ ಸಮ್ಮೇಳನ. ನಮ್ಮ ಸಾಧನೆಯ ಪಕ್ಷಿ ನೋಟ ಹಾಗೂ ಪ್ರಸ್ತುತ ಶೈಕ್ಷಣಿಕ ವರ್ಷದ ಸಂಕ್ಷಿಪ್ತ ವರದಿಯನ್ನು ತಮ್ಮ ಮುಂದೆ ಇಡಲು ಸಂತೋಷವೆನಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನ್ಯಾಕ್ ನಿಂದ "ಎ" ಗ್ರೇಡ್ ಪಡೆದುಕೊಂಡಿರುವ ನಮ್ಮ ಮಹಾವಿದ್ಯಾಲಯದಲ್ಲಿ ಪ್ರಸ್ತುತ 939 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಇದರಲ್ಲಿ 430 ವಿದ್ಯಾರ್ಥಿನಿಯರು ಇರುವುದು ವಿಶೇಷ. ಜೊತೆಗೆ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರವು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಮಾನ್ಯತೆ ಪಡೆದುಕೊಂಡಿದ್ದು , ಇಲ್ಲಿಯವರೆಗೆ ಈ ಸಂಶೋಧನಾ ಕೇಂದ್ರದಿಂದ 83 ಎಂ.ಫಿಲ್ ಪದವಿ ಹಾಗೂ 31 ಪಿಎಚ್. ಡಿ ಪದವಿ ಪಡೆದುಕೊಂಡಿರುತ್ತಾರೆ, ಪ್ರಸಕ್ತ ಸಾಲಿನಲ್ಲಿ 5 ಜನ ವಿದ್ಯಾರ್ಥಿಗಳು ಪಿಎಚ್.ಡಿ ಪದವಿ ಪಡೆದುಕೊಂಡಿದ್ದು, ಪ್ರಸ್ತುತ 20 ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನಾ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

**ಶೈಕ್ಷಣಿಕ ಸಾಧನೆ :**

ಈ ಶೈಕ್ಷಣಿಕ ವರ್ಷದಲ್ಲಿ ಉತ್ತಮ ಫಲಿತಾಂಶ ದಾಖಲಾಗಿದ್ದು, ಬಿ.ಎ, ಬಿಕಾಂ, ಬಿಸಿಎ ಮತ್ತು ಬಿಎಸ್‌ಸಿ ವಿಭಾಗಗಳಿಂದ ಒಟ್ಟು ಪ್ರತಿಶತ 95 ರಷ್ಟು ಫಲಿತಾಂಶವನ್ನು ಮಾಡಿ ದಾಖಲೆ ಮೆರೆದಿದ್ದಾರೆ. ಜೊತೆಗೆ ಅರ್ಥಶಾಸ್ತ್ರ ವಿಷಯದಲ್ಲಿ ಒಬ್ಬ ವಿದ್ಯಾರ್ಥಿನಿ ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡಿರುತ್ತಾರೆ. ಹಾಗೆಯೆ ವಾಣಿಜ್ಯಶಾಸ್ತ್ರ ವಿಭಾಗದಿಂದ 25 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡು ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಈ ಸಾಲಿನಲ್ಲಿ ನಮ್ಮ ಮಹಾವಿದ್ಯಾಲಯದ 86 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಸುಮಾರು 18 ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ನೌಕರಿ ಪಡೆದುಕೊಂಡಿರುತ್ತಾರೆ. ಬಿ.ಸಿ.ಎ ವಿಭಾಗದ ವಿದ್ಯಾರ್ಥಿಗಳು ಬೇರೆ ಬೇರೆ ಕಂಪನಿಗಳು ಆಯೋಜಿಸಿದ್ದ ಕ್ಯಾಂಪಸ್ ಸಂದರ್ಶನದಲ್ಲಿ ಭಾಗವಹಿಸಿ ಸುಮಾರು ಎಂಟು ವಿದ್ಯಾರ್ಥಿಗಳು ಆಯ್ಕೆಗೊಂಡಿದ್ದು, ಹೆಮ್ಮೆಯ ವಿಷಯವಾಗಿದೆ.

**ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು:**

1) ಈ ಶೈಕ್ಷಣಿಕ ವರ್ಷದಲ್ಲಿ ಮಹಾವಿದ್ಯಾಲಯವು ಕ್ರೀಡೆ ಮತ್ತು ಸಾಂಸ್ಕೃತಿಕ ವಿವಿಧ ಚಟುವಟಿಕೆಗಳನ್ನು ಆಯೋಜನೆ ಮಾಡಲಾಗಿದ್ದು, ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಪಠ್ಯೇತರ ಚಟುವಟಿಕೆಗಳಲ್ಲಿಯೂ ತಮ್ಮ ಅದ್ಭುತವಾದ ಪ್ರದರ್ಶನವನ್ನು ನೀಡಿರುತ್ತಾರೆ. ನಮ್ಮ ಮಹಾವಿದ್ಯಾಲಯದ ಬಿಸಿಎ ವಿಭಾಗದ ಜೀವನ್ ಖೇಮಲಾಪುರೆ ರಾಷ್ಟ್ರಮಟ್ಟದ ಹ್ಯಾಂಡ್‌ಬಾಲ್ ಆಟಗಾರನಾಗಿದ್ದು, ವಿವಿಧ ಕಡೆಗೆ ರಾಜ್ಯದ ವಿವಿಧ ಕಡೆಗೆ ಭಾಗವಹಿಸಿ ಪ್ರಶಸ್ತಿಪತ್ರಗಳನ್ನು ಪಡೆದುಕೊಂಡಿರುತ್ತಾನೆ. ಅದೆ ತೆರನಾಗಿ ಬಿಸಿಎ ವಿಭಾಗದ ಮತ್ತೊಬ್ಬ ಆಟಗಾರ ಗೌತಮ್ ಕಾಂಬಳೆ ಮತ್ತು ಬಿಎಸ್‌ಸಿ ವಿಭಾಗದ ಪ್ರವೀಣ್ ಜಾಧವ ಅವರು ಹ್ಯಾಂಡ್‌ಬಾಲ್ ಆಟದಲ್ಲಿ ವಿಶ್ವವಿದ್ಯಾಲಯದ ಬ್ಲ್ಯೂ ಆಟಗಾರರಾಗಿ ಪ್ರಶಸ್ತಿ ಪಡೆದು ಮಹಾವಿದ್ಯಾಲಯಕ್ಕೆ ಕೀರ್ತಿಯನ್ನು ತಂದಿದ್ದಾರೆ. ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಂದ ಮನ್ವಂತರ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡು ಇದರಲ್ಲಿ ಬಿಜಿನೆಸ್ ಕ್ವಿಜ್, ಬೆಸ್ಟ್ ಮ್ಯಾನೇಜರ್, ಮಾರ್ಕೆಟಿಂಗ್ ಮತ್ತು ಟ್ರೆಸರ್ ಹಂಟ್ ಮುಂತಾದ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್ತು ರಾಯಬಾಗ ಇವರ ಸಹಯೋಗದಲ್ಲಿ ಶಿವಸಂಚಾರ ನಾಟಕ ತಂಡ ಸಾನೇಹಳ್ಳಿ ಇವರಿಂದ ಮೂರು ದಿನಗಳ ಕಾಲ ಕನ್ನಡ ನಾಟಕೋತ್ಸವವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವು ಸ್ಥಳೀಯ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರಿಂದ ಮೆಚ್ಚುಗೆಗೆ ಪಾತ್ರವಾಗಿ ಪ್ರತಿ ವರ್ಷ ಇಂತಹ ನಾಟಕೋತ್ಸ ಜರುಗಬೇಕೆಂಬ ಸಲಹೆ ದೊರೆಯಿತು. ನೀಡಿದರು ಹೀಗೆ ಕಾಲಕಾಲಕ್ಕೆ ಕ್ರೀಡೆಗಳು ಸಾಂಸ್ಕೃತಿಕ ಚಟುವಟಿಕೆಗಳು ರಾಜ್ಯ , ರಾಷ್ಟ್ರಮಟ್ಟದ ವಿಚಾರ ಸಂಕೀರ್ಣ ಮತ್ತು ಕಾರ್ಯಾಗಾರಗಳು ನಮ್ಮ ಮಹಾವಿದ್ಯಾಲಯದಲ್ಲಿ ನಡೆಯುತ್ತಾ ಬಂದಿವೆ. ಜೊತೆಗೆ ಮಹಾವಿದ್ಯಾಲಯದಲ್ಲಿಯ ಎನ್.ಎಸ್.ಎಸ್, ಸ್ಕೌಟ್ಸ್ ಅಂಡ್ ಗೈಡ್ಸ್, ರೆಡ್‌ಕ್ರಾಸ್, ಮಹಿಳಾ ಘಟಕ, ಎಸ್‌ಸಿ ಎಸ್‌ಟಿ ಘಟಕಗಳು ನಿರಂತರವಾಗಿ ಕಾರ್ಯ ಪ್ರವರ್ತದಲ್ಲಿವೆ.

**ಶೈಕ್ಷಣಿಕ ಪ್ರವಾಸ ಕ್ಷೇತ್ರಕಾರ್ಯ ಬ್ಯಾಂಕುಗಳಿಗೆ ಭೇಟಿ:**

ಮಹಾವಿದ್ಯಾಲಯದ ಬಿಎಸ್‌ಸಿ ವಿಭಾಗದ ರಸಾಯನ ಶಾಸ್ತ್ರದ ವಿದ್ಯಾರ್ಥಿಗಳು ಕೊಲ್ಲಾಪೂರದ ಪಟೇಲ್ ಪೆಟ್ರೋ ಆಯಿಲ್ ಇಂಡಸ್ಟ್ರೀಜ್‌ಗೆ ಭೇಟಿ ನೀಡಿ, 'ರಿಫಾಯಿನಿಂಗ್ ಆಫ್ ಆಯಿಲ್' ದ ಬಗ್ಗೆ ಮಾಹಿತಿ ಪಡೆದುಕೊಂಡರು. ಜೊತೆಗೆ ಕೊಲ್ಲಾಪೂರದ ಮಹಾಲಕ್ಷ್ಮೀ, ಜ್ಯೋತಿಬಾ ದರ್ಶನ ಹಾಗೂ ಕನ್ನೇರಿ ಮಠಕ್ಕೆ ಭೇಟಿ ನೀಡಿದರು.

ಮಾಹಾವಿದ್ಯಾಲಯದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಜಾಗೃತಿ ಅರ್ಬನ್ ಕ್ರೆಡಿಟ್ ಸೊಸೈಟಿ, ಜನತಾ ಕೋ ಆಪರೇಟಿವ್ ಬ್ಯಾಂಕ್‌ಗಳಿಗೆ ಭೇಟಿ ನೀಡಿ ಲೆಕ್ಕಪತ್ರ ವ್ಯವಹಾರಗಳ ಕುರಿತು ಮಾಹಿತಿಯನ್ನು ಪಡೆದುಕೊಂಡರು ಎನ್‌ಎಸ್‌ಎಸ್ ಘಟಕದ ವತಿಯಿಂದ ಕೋಳಿಗುಡ್ಡ ಗ್ರಾಮದಲ್ಲಿ ವಿಶೇಷ ವಾರ್ಷಿಕ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಎನ್‌ಎಸ್‌ಎಸ್ ಘಟಕವು ಹಲವು ವಿಶೇಷ ವಿಷಯಗಳ ಕುರಿತು ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿದಿನ ಸಂಜೆ ಶಿಬಿರಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು, ಗ್ರಾಮಸ್ಥರಿಗೆ ಮನರಂಜನೆಯನ್ನು ನೀಡುವುದರ ಜೊತೆಗೆ ವಿವಿಧ ವಿಷಯಗಳ ತಿಳುವಳಿಕೆಯನ್ನು ನೀಡಿರುತ್ತಾರೆ.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಬಿ.ಆರ್. ದರೂರ ಸಾಹೇಬರ ಜಯಂತ್ಯುತ್ಸವದ ಅಂಗವಾಗಿ ಪ್ರತಿ ವರ್ಷ ನೀಡುತ್ತ ಬಂದಿರುವ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಈ ವರ್ಷ ಶಿಕ್ಷಕರಾದ ಶ್ರೀ ರವೀಂದ್ರ ಪಾಟೀಲ್ ಮತ್ತು ಶ್ರೀಮತಿ ಜಯಶ್ರೀ ಗದಗ ಇವರಿಗೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಅಥಣಿಯ ರಕ್ತ ಬಂಡಾರದ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ 101 ಯೂನಿಟ್ ರಕ್ತದಾನವನ್ನ ಮಾಡಿದರು.

ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ಗ್ರಾಮಸ್ಥರ ಸಹಾಯ ಸಹಕಾರ ಸಲಹೆ ಸೂಚನೆಗಳು ಮತ್ತು ಮಾರ್ಗದರ್ಶನದಿಂದ ಸಂಸ್ಥೆಯು ಅಭಿವೃದ್ಧಿಪಥದಲ್ಲಿ ನಡೆಯುತ್ತಿದೆ ಎಂದು ತಿಳಿಸುತ್ತಾ ವಾರ್ಷಿಕ ವರದಿ ವಾಚನಕ್ಕೆ ವಿದಾಯ ನೀಡುತ್ತೇನೆ. ಎಲ್ಲರಿಗೂ ಧನ್ಯವಾದಗಳು.

ಜೈ ಹಿಂದ್ ಜೈ ಕರ್ನಾಟಕ

## VIEW OF BCA LAB








## View of Building



